ಪ್ರಮಾಣ ವಚನ ಭೋದಿಸಿದ ದಿನಾಂಕಃ  20-06-2024

ಮುಂದುವರೆದ ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ

ಪೋಲೀಸ್ ಠಾಣೆಗೆ ಕರೆದಾಗ ಒಂದು ಸಹಿ ಮಾಡಿರುತ್ತೇನೆ ಮತ್ತು ಸ್ಥಳ ಪಂಚನಾಮೆ ಮಾಡುವಾಗ ಸ್ಥಳದಲ್ಲಿ ಒಂದು ಸಹಿ ಮಾಡಿರುತ್ತೇನೆ. ನಿಪಿ -5 ಅಮಾನತ್ತು ಮಹಜರ್ ಮಾಡುವ ಸಮಯದಲ್ಲಿ  ಅಕ್ಕಪಕ್ಕದ ಜಮೀನಿನಲ್ಲಿ ತುಂಬಾ ಜನರು ಇದ್ದರು. ಪೋಲೀಸರು ಅಲ್ಲಿದ್ದ ಜನರನ್ನು ಪಂಚನಾಮೆಗೆ ಕರೆದಿರುತ್ತಾರೆ. ಆಗ 5-6 ಜನ ಜಮೀನಿನಲ್ಲಿ ಕೆಲಸ ಮಾಡವಂತವರು ಬಂದಿದ್ದರು. ಸ್ಥಳದಲ್ಲಿ ಇದ್ದಂತಹ ವ್ಯಕ್ತಿಗಳ ಹೆಸರು ಜಯಶೀಲಗೌಡ, ಮಹೇಶಗೌಡ, ಇದ್ದು ಉಳಿದವರ ಹೆಸರು ಗೊತ್ತಿಲ್ಲ. ಪೋಲೀಸರು ಜಪ್ತಿ ಪಂಚನಾಮೆ ಮಾಡುವ ಸಮಯದಲ್ಲಿ ನನಗೆ ಯಾವುದೇ  ನೋಟೀಸ್ ಕೊಟ್ಟಿಲ್ಲ. ಮು ಮಾ -1 ದೊಣ್ಣೆ ಘಟನಾ ಸ್ಥಳದಿಂದ 100 ಮೀಟರ್ ದೂರದಲ್ಲಿ ಬಿದ್ದಿತ್ತು.  ಮು ಮಾ -1 ಜಮೀನಿನಲ್ಲಿ ಬಿದ್ದಿತ್ತು ಹಾಗೂ ಕಾಣಿಸುತ್ತಿತ್ತು. ಘಟನಾ ಸ್ಥಳದ ಸುತ್ತ ಮುತ್ತ ಯಾವುದೇ ಮನೆ ಇರಲಿಲ್ಲ.ಸಾಮಾನ್ಯವಾಗಿ ಜಮೀನಲ್ಲಿ ಬೇಲಿ ಮಾಡುವಾಗ ಒಂದು ಭಾಗದಲ್ಲಿ ಗೂಟವನ್ನು ಚೂಪು ಮಾಡಿ ನೆಲಕ್ಕೆ ಹುಗಿಯುತ್ತಾರೆ ಎಂದರೆ ಹೌದು. ಬೇಲಿ ಕಟ್ಟುವಾಗ ಹಗ್ಗದಿಂದ ಕಟ್ಟುತ್ತಾರೆ ಬಳ್ಳಿಯಿಂದ ಕಟ್ಟುತ್ತಾರೆ ಎಂದರೆ ನನಗೆ ಗೊತ್ತಿಲ್ಲ.  ಮು ಮಾ -1 ಕ್ಕೆ ಮೊಳೆಯನ್ನು ಹೊಡೆದಿರುವ ಗುರುತು ಇದೆ. ಪೋಲೀಸರು ಮೊಳೆ ಹೊಡೆದಿರುವ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿದ್ದೇವೆ ಎಂದು ನನ್ನ ಎದುರು ಬರೆದಿರುತ್ತಾರೆ.  ನಿಪಿ 5 ನ್ನು ಪೋಲಿಸರು ಓದಿ ತಿಳಿಸಿರುತ್ತಾರೆ ನಂತರ ನಾನು ಓದಿ ಸಹಿ ಮಾಡಿರುತ್ತೇನೆ.

ನಿಪಿ-5 ರಲ್ಲಿ ಮೊಳೆ ಹೊಡೆದ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುವ ಬಗ್ಗೆ ಬರೆದಿಲ್ಲ ಎಂದರೆ ಹೌದು. ಮು ಮಾ 1 ನ್ನು ಅಮಾನತ್ತುಪಡಿಸಿಕೊಂಡು ಬಿಳಿ ಬಟ್ಟೆಯನ್ನು ನನ್ನ

ಎದುರು ಸುತ್ತಿಲ್ಲ. ಆದರೆ ಎಂ ಒ 1 ಕ್ಕೆ ಚೀಟಿಗೆ ನನ್ನ ಸಹಿ ಪಡೆದು ಅಂಟಿಸಿರುತ್ತಾರೆ. ಎಂ ಒ 1 ರ ಮೇಲೆ ನಾನು ಸಹಿ ಮಾಡಿದ ಚೀಟಿ ಇಲ್ಲ ಎಂದರೆ ಹೌದು. ಮು ಮಾ -1 ನ್ನು ನಿಖರವಾಗಿ



ನಾನು ಅಳತೆ ಮಾಡಿಲ್ಲ. ನಿಪಿ 6 ಮತ್ತು 7 ರ ಮೇಲೆ ಇರುವ ಮು ಮಾ -1 ದೊಣ್ಣೆ ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ -6 ಮತ್ತು ನಿಪಿ 7 ರಲ್ಲಿ ಕಾಣುತ್ತಿರುವ ಗೂಟ ಬಿದಿರು ಗೂಟ ಎಂದರೆ ನನಗೆ ಗೊತ್ತಿಲ್ಲ. ನಿಪಿ -6 ಮತ್ತು ನಿಪಿ7 ರಲ್ಲಿ ಕಂಡುಬರುವ ಗೂಟವೇ ಎಂ ಒ 1 ಆಗಿದೆ ಎಂದು ಹೇಳುತ್ತಿದ್ದೇನೆ. ನಿಪಿ 6 ಮತ್ತು ನಿಪಿ -7 ರಲ್ಲಿ ಕಂಡು ಬರುವ ಗೂಟಕ್ಕೂ ಮು ಮಾ-1 ಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸಾಕ್ಷಿಯು ನಾನು ಮು ಮಾ -1 ನ್ನು ನೋಡಿದ್ದೇನೆ ಎಂದು ನುಡಿಯುತ್ತಾರೆ.

ಮು ಮಾ -1 ಮನೆ ಕಟ್ಟುವಾಗ ಸೆಂಟರಿಂಗ್ ಗೆ ಉಪಯೋಗಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಟವಾಹನಗಳು ಜಮೀನಿನಲ್ಲಿ ಉಬ್ಬು ತಗ್ಗು ಇರುವ ಜಾಗದಲ್ಲಿ ಹೋಗುವಾಗ ಆ ಕಡೆ ಈ ಕಡೆ ವಾಲಾಡುತ್ತವೆ ಎಂದರೆ ಹೌದು. ಪ್ರಾ ಸಾ -1 ರವರು ಹಾಗೂ ನಾನು ಸಂಬಂಧಿಕರಾಗಿರುವುದರಿಂದ ಪ್ರಾ ಸಾ -1 ರವರಿಗೆ ಸಹಾಯ ಮಾಡಲು ನಾನು ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾ ಸಾ -2 ರವರಿಗೆ ಟ್ರಾಕ್ಟರ್ ಓಡಿಸಲು ಡಿ ಎಲ್ ಇಲ್ಲ ಮತ್ತು ಟ್ರಾಕ್ಟರ್ ಸರಿಯಾಗಿ ಓಡಿಸಲು ಬರುವುದಿಲ್ಲ ಜಮೀನಿನಲ್ಲಿ ತಗ್ಗು ಉಬ್ಬು ಇದ್ದ ಕಾರಣ ಟ್ರಾಕ್ಟರ್ ಪಲ್ಟಿಯಾಗಿದ್ದ ಕಾರಣ ಪ್ರಾ ಸಾ 2 ರವರ ತಲೆಗೆ ಪೆಟ್ಟಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ಗೊತ್ತಿದ್ದರೂ ಸಹ ಆರೋಪಿಯನ್ನು ಈ ಪ್ರಕರಣದಲ್ಲಿ ಫಿಕ್ಸ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರಾ ಸಾ -1 ರವರಿಗೆ ಟ್ರಾಕ್ಟರ್ ಇದೆ.

ನಿಪಿ -6 ಮತ್ತು ನಿಪಿ 7 ನ್ನು ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಬರೆದಿಲ್ಲ, ನಾನು ಸ್ಥಳಕ್ಕೆ ಹೋಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಿಪಿ -5 ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.



ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).

ಎಸ್.ಸಿ. ಸಂ:10042/2021
ಪಿಡಬ್ಲೂ- 3